# ನವಿಲುಗನ್ನಡಿ

- ಚೀಮನಹಳ್ಳಿ ರಮೇಶ ಬಾಬು ಅವರು ನಡೆಸಿಕೊಟ್ಟ ಸ.ರಘುನಾಥ ಅವರ ಸಂದರ್ಶನ ಚೆನ್ನಾಗಿ ಮೂಡಿ ಬಂದಿದೆ. ಗಡಿನಾಡಲ್ಲಿದ್ದುಕೊಂಡು ಹತ್ತು ಹಲವು ಕನ್ನಡದ ಕೆಲಸಗಳನ್ನು ಮಾಡುತ್ತಾ ಸಾಗಿರುವ ರಘುನಾಥರ ಕನ್ನಡ ಪದಗಳ ಬಳಕೆ ಬಗ್ಗೆ ಕೇಳಿ ಆನಂದವಾಯಿತು. ಮೊರಸುಗನ್ನಡ, ಕಂದೆಲಗು, ತೆಲುಗನ್ನಡಗಳ ವಿಚಾರಗಳ ಆಪ್ತತೆ ಮತ್ತು ಭವಿಷ್ಯದಲ್ಲಿ ಕನ್ನಡದ ಪ್ರಸ್ತುತತೆ ಕುರಿತ ಸಂವಹನ ಹೊಸ ಚಿಂತನೆಗೆ ಹಚ್ಚಿತು.

**ಸಂತೆಬೆನ್ನೂರು ಫೈಜ್ನಟ್ರಾಜ್, ದಾವಣಗೆರೆ**

- ಜೂನ್ ಮಯೂರ ವಿಶೇಷದಲ್ಲಿ 'ಹಂಸಗೀತೆ 50 ವರ್ಷ' ಮುರಳೀಧರ ಖಜಾನೆ ಅವರ ಲೇಖನ ತುಂಬಾ ಮನೋಜ್ಞವಾಗಿ ಮೂಡಿಬಂದಿದೆ. ಒಂದು ಕಾದಂಬರಿಯನ್ನು ದೃಶ್ಯಕಾವ್ಯವನ್ನಾಗಿಸುವುದು ಅಷ್ಟು ಸುಲಭದ ಕಾರ್ಯವಲ್ಲ ಒಂದು ಚಿತ್ರ ಪ್ರಸಿದ್ಧವಾಗಬೇಕಾದರೆ ಅದರ ಹಿಂದೆ ಇರುವ ಶ್ರಮ ಮತ್ತು ಶ್ರದ್ಧೆ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಬಹಳ ಸುಂದರವಾಗಿ ಚಿತ್ರಿಸಲಾಗಿದೆ. ಮೌಲಿಕ ಮತ್ತು ಐತಿಹಾಸಿಕ ಲೇಖನ ನೀಡಿದ ಮಯೂರಕ್ಕೆ ಧನ್ಯವಾದಗಳು.

**ಕೆ.ಪಿ. ರಾಮುಗುಂಡಿ, ಬೈಲಹೊಂಗಲ**

- ಹಂಸಗೀತೆ 50ರ ಸಂಭ್ರಮ ಮನಮೋಹಕವೆನಿಸಿತು. ಸಮಗ್ರ ವಿವರಗಳನ್ನೊಳಗೊಂಡ ಅದ್ಭುತವಾದ ಬರಹ ಜಿ.ವಿ. ಅಯ್ಯರ್ ಅವರಿಗೆ ಸಕಾಲಿಕ ಸಮರ್ಪಣೆ ಅರ್ಪಿಸಿದೆ.

**ಸುಮನಾ, ಬೆಂಗಳೂರು**

- 'ಕಾವ್ಯಸಂಕ' ಅಂಕಣದಲ್ಲಿ ಆರಿಫ್ ರಾಜಾ ಅವರು ಮಾಡಿದ, ಉಕ್ರೇನ್ ದೇಶದ ಕವಯಿತ್ರಿ ಐರಿನಾ ಶುವಾಲೊವಾ ಸಂದರ್ಶನ ಚೆನ್ನಾಗಿತ್ತು. ಸಾಮಾನ್ಯ ಪ್ರಜೆಯಾಗಿ ಐರಿನಾ ಯೋಚಿಸುವುದಕ್ಕೂ ಒಬ್ಬ ಕವಯಿತ್ರಿ ಆಗಿ ಯೋಚಿಸಿದಾಗ ಯುದ್ಧದ ಕುರಿತು ತಾಳುವ ನಿಲುವು ಭಿನ್ನವಾದದ್ದು. ಯುದ್ಧ ಲೋಕದ ಮಾಯದ ಗಾಯ ಎಂಬುದು ಪದೇ ಪದೇ ಸಾಬೀತಾಗಿದೆ.

**ದೇವೀಂದ್ರಪ್ಪ, ಕನ್ನಡ ವಿ.ವಿ., ಹಂಪಿ ವಿದ್ಯಾರಣ್ಯ**

- ಅಗ್ರಹಾರ ಕೃಷ್ಣಮೂರ್ತಿ ಅವರ 'ಪ್ರಾಪರ್ಟಿ




ಆಕಾಶ ಮಲ್ಲಿಗೆ' ಮಧುರ ಹಳೆಯ ನೆನಪುಗಳ ಕಥಾವಸ್ತುವನ್ನು ಒಳಗೊಂಡಿದೆ. ಮನಮುಟ್ಟುವ ಸರಳ ಆದರೆ, ಪ್ರಭಾವಶಾಲಿ ಭಾಷಾ ನಿರೂಪಣೆಯೊಂದಿಗೆ ಓದುಗರ ಆಸಕ್ತಿಯನ್ನು ಆರಂಭದಿಂದ ಅಂತ್ಯದವರೆಗೆ ಅಯಸ್ಕಾಂತದಂತೆ ಹಿಡಿದಿಟ್ಟುಕೊಂಡು ಓದಿಸಿಕೊಂಡ ವಿಶಿಷ್ಟ ಕಥೆ. ಅಗ್ರಹಾರ ಅವರು ಮತ್ತಷ್ಟು ಕಥೆಗಳನ್ನು ಬರೆಯಲಿ, ಅವರೊಳಗಿನ ಕಥೆಗಾರ ಕನ್ನಡಿಗರಿಗೆ ತಲುಪಲಿ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಇಸ್ಮಾಯಿಲ್ ತಳಕಲ್ ಅವರ 'ದೇವರು ನಕ್ಕುಬಿಟ್ಟ' ಕಥೆ ತುಂಬಾ ಸೊಗಸಾಗಿದೆ. ಪಾತ್ರಗಳ ತೊಳಲಾಟ ವಿಭಿನ್ನವಾಗಿ ನಿಲ್ಲುತ್ತದೆ. ಭರಮನಿಗೆ ಗೋಬಿ ಮಂಚೂರಿ, ದೇವಸ್ಥಾನದ ಗಂಟೆ ಬಾರಿಸುವುದು ಸೇರಿದಂತೆ ಇತರ ಪಾತ್ರಗಳೂ ಬಯಕೆ ಸುತ್ತ ಸುತ್ತುವ ಕಥೆಯ ಗತಿಯು ಸೃಜನಶೀಲತೆಯಿಂದ ಕೂಡಿದೆ. ಭಾಷೆ ,ಕಥಾ ಹಂದರ, ಶೈಲಿ, ಅಭಿವ್ಯಕ್ತಿ ಸ್ವಾತಂತ್ರ್ಯ ಸುಂದರವಾಗಿದೆ. ಸಾಮಾಜಿಕ, ಸಾಂಸ್ಕೃತಿಕ ಸ್ವಾತಂತ್ರ್ಯಕ್ಕಾಗಿ ಇನ್ನೂ ಹೋರಾಟದ ಬಗ್ಗೆ ಚಿಂತಿಸಬೇಕಿದೆ.

**ಎಸ್‌ಆರ್‌ನರಸಿಂಹ ಪ್ರಸಾದ್, ಕುಣಿಗಲ್**